# ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಡಾ|| ವೈ.ಎ. ನಾರಾಯಣಸ್ವಾಮಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1094

ಉತ್ತರಿಸಬೇಕಾದ ದಿನಾಂಕ : 21.09.2021

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕೋಲಾರ ಜಿಲ್ಲೆಯ ಕೇಂದ್ರ ಸಹಕಾರ ಬ್ಯಾಂಕ್ ವತಿಯಿಂದ ರೂ. 50 ಲಕ್ಷಗಳಿಗಿಂತಲೂ ಹೆಚ್ಚಿನ ಸಾಲವನ್ನು ಪಡೆದಿರುವಂತಹ ಫಲಾನುಭವಿಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)</td><td>ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನಿಂದ ರೂ. 50.00 ಲಕ್ಷಗಳಿಗಿಂತ ಹೆಚ್ಚಿನ ಸಾಲವನ್ನು 03 ಫಲಾನುಭವಿಗಳಿಗೆ ಒಟ್ಟು ರೂ.1960.00 ಲಕ್ಷಗಳ ಸಾಲವನ್ನು ಮಂಜೂರು ಮಾಡಲಾಗಿರುತ್ತದೆ. ಫಲಾನುಭವಿವಾರು ವಿವರ ಈ ಕೆಳಕಂಡಂತಿರುತ್ತದೆ.<br>(ರೂ.ಲಕ್ಷಗಳಲ್ಲಿ)
<table>
<tr><th>ಕ್ರ ಸಂ</th><th>ಫಲಾನುಭವಿಯ ಹೆಸರು</th><th>ಸಾಲದ ಉದ್ದೇಶ</th><th>ವಿತರಿಸಿದ ಸಾಲದ ಮೊತ್ತ</th></tr>
<tr><td>1</td><td>ಶ್ರೀ. ಎಸ್.ಎನ್. ನಿಶಾಂತ್</td><td>ಕೋಳಿ ಸಾಕಾಣಿಕೆ</td><td>1000.00</td></tr>
<tr><td>2</td><td>ಶ್ರೀ. ಎಂ. ನಾರಾಯಣಸ್ವಾಮಿ</td><td>ಕೋಳಿ ಸಾಕಾಣಿಕೆ</td><td>460.00</td></tr>
<tr><td>3</td><td>ಶ್ರೀಮತಿ. ಪ್ರೀತಿ ಬಿ.ಎನ್</td><td>ಕನ್ವೆಂಷನ್ ಹಾಲ್ ನಿರ್ಮಿಸಲು</td><td>500.00</td></tr>
<tr><td colspan="3">ಒಟ್ಟು</td><td>1960.00</td></tr>
</table>
</td></tr>
<tr><td>ಆ)</td><td>ಮೇಲ್ಕಂಡ ಫಲಾನುಭವಿಗಳಿಗೆ ಸಾಲ ವಿತರಣೆ ಮಾಡಲು ಡಿ.ಸಿ.ಸಿ ಬ್ಯಾಂಕ್ ಅನುಸರಿಸಿರುವ ಮಾನದಂಡಗಳೇನು;</td><td>ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ. ಈ ಮೇಲ್ಕಂಡ ಫಲಾನುಭವಿಗಳಿಗೆ ಸಾಲ ಮಂಜೂರು ಮಾಡಲು ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗಿದೆ.
<ul>
<li>ಫಲಾನುಭವಿಗಳಿಂದ ಸಾಲ ಮಂಜೂರು ಮಾಡುವಂತೆ ಕೋರಿ ಸಾಲದ ಅರ್ಜಿ.</li>
<li>ಸಾಲದ ಭದ್ರತೆಗಾಗಿ ಅರ್ಜಿದಾರರು ಅಪೇಕ್ಷಿಸಿರುವ ಸಾಲದ ಮೊತ್ತಕ್ಕಿಂತ ಹೆಚ್ಚಿನ ಮೌಲ್ಯದ ಸ್ಥಿರಾಸ್ತಿಯ ದಾಖಲೆಗಳನ್ನು ಪಡೆದು, ದಾಖಲೆಗಳ ನೈಜತೆಯ ಬಗ್ಗೆ ಬ್ಯಾಂಕಿನ ಪ್ಯಾನಲ್‌ನಲ್ಲಿರುವ ವಕೀಲರಿಂದ ಕಾನೂನು ಸಲಹೆ ಪಡೆಯಲಾಗಿರುತ್ತದೆ.</li>
<li>ಸ್ಥಿರಾಸ್ತಿಯ ಮೌಲ್ಯದ ಬಗ್ಗೆ ಬ್ಯಾಂಕಿನ ಪ್ಯಾನಲ್‌ನಲ್ಲಿರುವ ಇಂಜಿನಿಯರ್‌ರವರಿಂದ ಆಸ್ತಿ ಮೌಲ್ಯ ವರದಿ ಪಡೆಯಲಾಗಿರುತ್ತದೆ.</li>
<li>ವಂಶವೃಕ್ಷ ಪ್ರಮಾಣ ಪತ್ರ.</li>
</ul>
</td></tr>
</table>

| | | |
|---|---|---|
| | | • ಫಲಾನುಭವಿಗಳಿಂದ ಕೆ.ವೈ.ಸಿ ದಾಖಲೆಗಳು.<br>• ಕೋಳಿ ಫಾರಂ & ಕನ್ವೆಂಷನ್ ಹಾಲ್ ನಿರ್ಮಿಸಲು ಪ್ಲಾನ್ ಮತ್ತು ಎಸ್ಟಿಮೇಟ್.<br>• ಈ ಮೇಲ್ಕಂಡಂತೆ ಪಡೆದ ದಾಖಲೆಗಳನ್ನು ಬ್ಯಾಂಕಿನ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಿ ಸಮಾಜ ಕಲ್ಯಾಣ ಇಲಾಖೆ ರವರ ಆದೇಶ ಸಂಖ್ಯೆ: ಸಕಇ 158 ಎಸ್‌ಎಸ್‌ಪಿ 2016, ಬೆಂಗಳೂರು. ದಿ:18.06.2016 ರಂದು ಹೊರಡಿಸಿರುವ ಆದೇಶದಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ಯಮಿಗಳಿಗೆ ಜಾರಿಯಲ್ಲಿರುವ ಶೇ.4ರ ಬಡ್ಡಿದರದಲ್ಲಿ ಸಾಲ ಮಂಜೂರು ಮಾಡಲಾಗಿರುತ್ತದೆ.<br><br>ಸಾಲ ಮಂಜೂರು ಮಾಡಿದ ನಂತರ ಸಾಲದ ಭದ್ರತೆಗಾಗಿ ನೀಡಿರುವ ಸ್ಥಿರಾಸ್ತಿಯನ್ನು ಬ್ಯಾಂಕಿನ ಹೆಸರಿಗೆ ಉಪನೋಂದಣಾಧಿಕಾರಿಗಳಿಂದ ಅಡಮಾನ ಮಾಡಿಕೊಂಡು ಕಾಮಗಾರಿಯ ಪ್ರಗತಿಯನ್ನು ಅನುಸರಿಸಿ ಹಂತ ಹಂತವಾಗಿ ಸಾಲ ಬಿಡುಗಡೆ ಮಾಡಲಾಗಿರುತ್ತದೆ. |
| ಇ) | ಮೇಲ್ಕಂಡ ಸಾಲ ನೀಡುವಿಕೆಯಲ್ಲಿ ನಿಯಮ ಉಲ್ಲಂಘನೆ ಮಾಡಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ವಿವರಗಳನ್ನು ನೀಡುವುದು; | ಸಾಲ ನೀಡುವಿಕೆಯಲ್ಲಿ ನಿಯಮಗಳನ್ನು ಉಲ್ಲಂಘನೆ ಮಾಡಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |
| ಈ) | ನಿಯಮ ಬಾಹಿರವಾಗಿ ಇಂತಹ ಸಾಲಗಳನ್ನು ಶಿಫಾರಸ್ಸು ಮಾಡುವ ಮತ್ತು ಅನುಮೋದನೆ ಮಾಡುವ ನಿರ್ದೇಶಕರು/ಅಧಿಕಾರಿಗಳ ವಿರುದ್ಧ ಸರ್ಕಾರವು ಕೈಗೊಂಡಿರುವ ಕ್ರಮಗಳೇನು? | ಅನ್ವಯಿಸುವುದಿಲ್ಲ. |

**ಸಂಖ್ಯೆ: ಸಿಒ 274 ಸಿಎಲ್‌ಎಸ್ 2021**

ಎಸ್. ಟಿ. ಸೋಮಶೇಖರ್

(ಎಸ್.ಟಿ ಸೋಮಶೇಖರ್)

ಸಹಕಾರ ಸಚಿವರು